# ಶ್ರೀಮಾತೆಯವರು ಕೈಗೊಂಡ ತೀರ್ಥಯಾತ್ರೆಗಳು

ಸ್ವಾಮಿ ಆತ್ಮಜ್ಞಾನಂದ

ಶ್ರೀಮಾತೆ ಶಾರದಾದೇವಿಯವರು ಭಾರತದ ಹಲವು ಪುಣ್ಯಕ್ಷೇತ್ರಗಳನ್ನು ಸಂದರ್ಶಿಸಿ, ಅಲ್ಲೆಲ್ಲ ದಿವ್ಯತೆಯ ಶಕ್ತಿಸಂಚಾರ ಮಾಡಿದ್ದಾರೆ. ಈ ಕುರಿತು ಬರೆದಿರುವ ಪೂಜ್ಯ ಸ್ವಾಮೀಜಿಯವರು 'ವಿವೇಕಪ್ರಭ' ದ ಸಂಪಾದಕರಾಗಿದ್ದರು. ಮೈಸೂರು ಶ್ರೀರಾಮಕೃಷ್ಣ ಆಶ್ರಮದ ಅಧ್ಯಕ್ಷರೂ ಆಗಿದ್ದ ಅವರು, ಪ್ರಸ್ತುತ ಬ್ರೆಜಿಲ್‌ನ ರಿಯೋ ಡಿ ಜನೇರಿಯೋ ಆಶ್ರಮದ ಅಧ್ಯಕ್ಷರಾಗಿದ್ದಾರೆ.



ಅವತಾರ ಪುರುಷರಾದ ಶ್ರೀರಾಮಕೃಷ್ಣರನ್ನು ಹಾಗೂ ಶ್ರೀಮಾತೆ ಶಾರದಾದೇವಿಯವರನ್ನು ಕುರಿತು ಆಲೋಚಿಸುವುದು, ಬರೆಯುವುದು ಹಾಗೂ ಮಾತನಾಡುವುದು ಒಂದು ರೀತಿಯಲ್ಲಿ ಧ್ಯಾನವೇ ಆಗಿದೆ. ಇದಕ್ಕೆ ಲೀಲಾಚಿಂತನೆಯೆಂದು ಭಕ್ತಿಶಾಸ್ತ್ರಗಳು ಹೇಳುತ್ತವೆ. ಆರಾಧ್ಯ ದೇವರ ನಾನಾ ವಿಚಾರಗಳಿಂದ ಮನಸ್ಸನ್ನು ತುಂಬಿದರೆ, ಅದರಲ್ಲಿನ ಬೇಡದ ಸಂಸ್ಕಾರಗಳು, ಕಲುಷಗಳು ಸಹಜವಾಗಿ ತಮ್ಮ ಜಾಗ ಖಾಲಿ ಮಾಡುತ್ತವೆ. ಮನಸ್ಸನ್ನು ಶುದ್ಧಗೊಳಿಸುವ ಸಾಧನೆಗಳಲ್ಲಿ ಇದೊಂದು ಸೂಕ್ತ ಮಾರ್ಗ. ಧರ್ಮರಕ್ಷಣೆಗಾಗಿ ಅವತಾರ ಪುರುಷರ ಆಗಮನ. ಧರ್ಮಕ್ಕೆ ಮೂರು ಪ್ರಮುಖ ಸ್ತಂಭಗಳಿವೆ: ೧) ಸಾಧನೆಯಲ್ಲಿ ತೊಡಗಿರುವ ಸಾಧುಗಳು ಹಾಗೂ ಮಹಾತ್ಮರು, ೨) ಉತ್ಸವ, ವ್ರತ, ನೇಮ-ನಿಷ್ಠೆಗಳು ಹಾಗೂ ೩) ತೀರ್ಥಸ್ಥಾನಗಳು. ಇವೇ ಧರ್ಮಕ್ಕೆ ಬಲ ಹಾಗೂ ಚಲನೆಯನ್ನು ನೀಡುವ ಅಡಿಪಾಯಗಳು. ತಮ್ಮ ಜೀವನ ಅನುಭಾವ ಹಾಗೂ ಉಪದೇಶಗಳಿಂದ ಅವತಾರಪುರುಷರು ಈ ಮೂರಕ್ಕೂ ಶಕ್ತಿ ತುಂಬುತ್ತಾರೆ - ಧರ್ಮವನ್ನು ತನ್ಮೂಲಕ ಸಂರಕ್ಷಿಸುತ್ತಾರೆ. ತಮ್ಮ ಅವತಾರ ಲೀಲೆಯಲ್ಲಿ ಶ್ರೀರಾಮಕೃಷ್ಣರು ಹಾಗೂ ಶ್ರೀಮಾತೆ ಹೇಗೆ ಈ ಮೂರೂ ಆಯಾಮಗಳನ್ನು ಪುಷ್ಟೀಕರಿಸಿದರು ಎಂದು ಗಮನಿಸಿದರೆ, ಅವರುಗಳ ಮಹತ್ವವನ್ನು ಮತ್ತಷ್ಟು ಚೆನ್ನಾಗಿ ತಿಳಿಯಬಹುದು.

ಧರ್ಮಗಳ ತಿರುಳಾದ ಆಧ್ಯಾತ್ಮಿಕ ಪಿಪಾಸುಗಳಿಗೆ ಒತ್ತು ನೀಡಿ, ಮಾನವಸಹಜವಾದ ಕಾಮನೆಗಳಿಂದ ಜನಿತವಾದ ಎಲ್ಲ ಸಂಕುಲಗಳನ್ನು ತೆಗೆದುಹಾಕಿ, ನೈಜ ಹಾಗೂ ಅತ್ಯಂತ ಸಹಜವಾದ ಮಾರ್ಗವನ್ನು ನಮಗೆ ಅವತಾರ ಪುರುಷರು ಪರಿಚಯಿಸುತ್ತಾರೆ. ಇವರುಗಳು ನಡೆದ ಹಾದಿ ಪವಿತ್ರ. ಶ್ರೀಕೃಷ್ಣನ ಲೀಲೆಗಳಿಂದ ಪಾವನವಾದ ವೃಂದಾವನದ ಪ್ರತಿ ಧೂಳಿನ ಕಣವೂ ಪವಿತ್ರ, ರಜ - ಪೂಜಾರ್ಹ. ಅಂತೆಯೇ ದಕ್ಷಿಣೇಶ್ವರ, ಕಾಮಾರಪುಕುರ, ಜಯರಾಂಬಾಟಿ ಮುಂತಾದ ಸ್ಥಳಗಳು ತೀರ್ಥಕ್ಷೇತ್ರಗಳಾಗಿವೆ. ಶ್ರೀರಾಮಕೃಷ್ಣರು ಹಾಗೂ ಶ್ರೀಮಾತೆ ಹಾಗೂ ನೇರ ಶಿಷ್ಯರು ಓಡಾಡಿದ ಜಾಗಗಳು, ರಸ್ತೆಗಳು, ಬಳಸಿದ ಪದಾರ್ಥಗಳು; ಅವರುಗಳ ಭಾವಚಿತ್ರಗಳು-ಇವೆಲ್ಲ ಇಂದು ನಮ್ಮ ಸಂಪತ್ತು. ಅವರುಗಳು ನಮಗೆ ನೀಡಿರುವ ಪವಿತ್ರ ಬಳುವಳಿ. ಇವೇ ನಿಜವಾದ ಆಸ್ತಿ ನಮಗೆ.

ಎಲ್ಲ ಧರ್ಮಗಳೂ ಪ್ರಾಚೀನಕಾಲದಿಂದ, ತೀರ್ಥಯಾತ್ರೆಗೆ ಪ್ರಾಶಸ್ತ್ಯ ನೀಡಿವೆ. ಕಠಿಣ ಪರಿಶ್ರಮದೊಂದಿಗೆ ಕಾಡು ಬೆಟ್ಟ ಪ್ರದೇಶಗಳಲ್ಲಿ ಬರಿಗಾಲಿನಲ್ಲಿ ನಡೆದು ತೀರ್ಥಕ್ಷೇತ್ರಗಳಿಗೆ ಹೋಗುವುದು ಭಾರತದಲ್ಲಿ ಅನೇಕ ಕಡೆಗಳಲ್ಲಿ ಕಂಡುಬರುವ ದೃಶ್ಯ. ಅಂತೆಯೇ ಮುಸಲ್ಮಾನರು ತಮ್ಮ ಪವಿತ್ರ ಸ್ಥಾನವಾದ ಮೆಕ್ಕಾಗೆ ಹೋಗುತ್ತಾರೆ. ಕ್ರಿಸ್ತಾನರು ಜೆರೂಸೆಲಂ ನಗರವನ್ನು ಕಾಣಲು ಶ್ರಮವಹಿಸುತ್ತಾರೆ. ಬ್ರೆಜಿಲ್ ದೇಶದ ರಕ್ಷಾದೇವತೆಯಾದ 'ಅಪರಿ ಸೀದಾ' ದೇವಿಯ ವಿಗ್ರಹಕ್ಕೆ ಪೂಜೆ ಸಲ್ಲಿಸಲು ಹತ್ತಾರು ಸಾವಿರ ಜನ ದೇಶದ ನಾನಾ ಜಾಗಗಳಿಂದ ನಡೆದು ಬರುತ್ತಾರೆ! ಭಕ್ತಿ-ಶ್ರದ್ಧೆಗಳಿರುವ ಎಲ್ಲ ಜನರಲ್ಲೂ, ಧರ್ಮಗಳಲ್ಲೂ ಇಂತಹ ಆಚರಣೆಗಳನ್ನು ಕಾಣುತ್ತೇವೆ. ಪವಿತ್ರ ಸ್ಥಳಗಳನ್ನು ಸಂದರ್ಶಿಸಿ, ಅಲ್ಲಿನ ಪಾವನ ಪರಿಸರದಲ್ಲಿ ಮಿಂದು, ದೇವಾಲಯಗಳಲ್ಲಿ ಆರಾಧಿಸಿ, ಪುನೀತರಾಗುವುದು ಪ್ರಚಲಿತ ಕ್ರಮ. ಜನವಸತಿಯಿರದ ನಿಸರ್ಗದ ತಾಣಗಳಲ್ಲಿ, ಬೆಟ್ಟಗಳ ತುದಿಯಲ್ಲಿ, ವನ್ಯ ಮೃಗಗಳಿರುವ ಕಾಡುಗಳಲ್ಲಿ, ನದಿಗಳ ಉಗಮ ಸ್ಥಾನಗಳಲ್ಲಿ, ಕಡಲಿನ ತೀರದಲ್ಲಿ, ಶಾಂತ ಪ್ರದೇಶಗಳಲ್ಲಿ ತೀರ್ಥಸ್ಥಳಗಳನ್ನು ಕಾಣುತ್ತೇವೆ. ಇಂತಹ ದುರ್ಗಮ ಪ್ರದೇಶಗಳಿಗೆ ಪಯಣಿಸುವುದು ಶ್ರಮವೆನಿಸುವುದಿಲ್ಲ, ಸಾಧನೆಯಾಗುತ್ತದೆ.

ವಿಲಾಸಕ್ಕಾಗಿ ಸುಂದರ ಪ್ರದೇಶಗಳಿಗೆ ಪಯಣಮಾಡಿ ಬಹಿರ್ಮುಖ ಮನಸ್ಸಿಗೆ ಮತ್ತಷ್ಟು ಉತ್ತೇಜನ ನೀಡುವುದು ಮನಸ್ಸಿನ ನಿರ್ಮಲತೆಗೆ ಸಹಾಯ ಮಾಡದು. ನಮ್ಮ ಅಂತ ರಂಗದ ತುಡಿತಕ್ಕೆ ಸಾಂತ್ವನ ನೀಡುವ, ಪ್ರಾಪಂಚಿಕ ಆಲೋಚನೆಗಳಿಂದ ಕೆಲವು ದಿನಗಳಾದರೂ ಮುಕ್ತರಾಗಲು ಅವಕಾಶ ನೀಡುವ ಯಾತ್ರೆಗಳು ಪಾವನ ಕರ್ತವ್ಯ. ಸ್ಥಳಮಹಿಮೆಯನ್ನು ಅರಿತು ಯಾತ್ರೆ ಕೈಗೊಂಡಾಗ ಶ್ರದ್ಧೆಗಳು ಇಮ್ಮಡಿಸುತ್ತವೆ. ಶ್ರೀಮಾತೆ ಕೈಗೊಂಡ ಯಾತ್ರೆಗಳೆಲ್ಲವೂ ಇದೇ ಉದ್ದೇಶವನ್ನು ಹೊಂದಿದ್ದವು. ಆ ಕ್ಷೇತ್ರಗಳನ್ನು ಮತ್ತಷ್ಟು ಪವಿತ್ರಗೊಳಿಸಿದರು!

ಶ್ರೀರಾಮಕೃಷ್ಣರ ತಂದೆ ಶ್ರೀ ಕ್ಷುದೀರಾಮ ಚಟ್ಟೋಪಾಧ್ಯಾಯರು ಪಿತೃಗಳಿಗೆ ಪಿಂಡಪ್ರದಾನ ಮಾಡಲು ಗಯೆಗೆ ಯಾತ್ರೆ ಹೋದಾಗ ಶ್ರೀಗದಾಧರ ವಿಷ್ಣುವಿನ ದಿವ್ಯದರ್ಶನವಾಗಿ, ಪುತ್ರನಾಗಿ ಜನಿಸುವುದಾಗಿ ತಿಳಿಸಿದ! ಆನಂತರ ಕ್ಷುದೀರಾಮರು ದಕ್ಷಿಣದ ರಾಮೇಶ್ವರ ತೀರ್ಥಕ್ಕೆ ದೀರ್ಘಪ್ರಯಾಣ ಮಾಡಿದಾಗ ಅಲ್ಲಿಂದ ಪವಿತ್ರವಾದ ರಾಮೇಶ್ವರ ಶಿಲೆಯನ್ನು ಮನೆಗೆ ತಂದು ಪ್ರತಿಷ್ಠಾಪನೆ ಮಾಡಿ ದಿನನಿತ್ಯ ಭಕ್ತಿ-ಶ್ರದ್ಧೆಗಳಿಂದ ಪೂಜೆ-ನೈವೇದ್ಯಾದಿಗಳನ್ನು ಮಾಡುತ್ತಿದ್ದರು. ಶ್ರೀರಾಮಕೃಷ್ಣರು ಮಥುರನಾಥ ವಿಶ್ವಾಸನೊಂದಿಗೆ ಶ್ರೀವೈದ್ಯನಾಥ ಕ್ಷೇತ್ರವಾದ ದೇವಘರ, ಕಾಶಿ, ಪ್ರಯಾಗ, ವೃಂದಾವನ, ಮಥುರಾ ಇತ್ಯಾದಿ ತೀರ್ಥಕ್ಷೇತ್ರಗಳಿಗೆ ಭೇಟಿ ನೀಡಿದ್ದರು. ಎಲ್ಲಾ ಕ್ಷೇತ್ರಗಳಲ್ಲೂ ಆಯಾ ಸ್ಥಳಗಳ ಮಹಿಮೆಗೆ ಅನುಸಾರ ದಿವ್ಯ ಅನುಭವಗಳನ್ನು ಪಡೆಯುತ್ತಿದ್ದರು. ಈ ಎಲ್ಲ ತೀರ್ಥಸ್ಥಳಗಳೂ ಅತ್ಯಂತ ಪವಿತ್ರ ಹಾಗೂ ಮಹಿಮಾಯುಕ್ತ ಎಂದು ತನ್ಮೂಲಕ ತಿಳಿಸಿದರು. ಕಾಶಿಯಲ್ಲಿ ಶ್ರೀವಿಶ್ವೇಶ್ವರನು ಶವಗಳ ಕಿವಿಯಲ್ಲಿ ತಾರಕ ಮಂತ್ರವನ್ನು ಹೇಳುತ್ತಿದ್ದುದನ್ನು ಹಾಗೂ ತಾಯಿ ವಿಶಾಲಾಕ್ಷಿ ಎಲ್ಲಾ ಬಂಧನಗಳನ್ನು ಕತ್ತರಿಸಿ ಆ ಜೀವವನ್ನು ಮುಕ್ತಗೊಳಿಸುತ್ತಿದ್ದುದನ್ನು ಪ್ರತ್ಯಕ್ಷ ದರ್ಶಿಸಿದರು. ಶಾಸ್ತ್ರ, ಪುರಾಣಗಳು ಹಾಗೂ ಪರಂಪರೆ ಕಟ್ಟುಕಥೆಗಳಲ್ಲ - ಸತ್ಯವೆಂದು ತಮ್ಮ ದಿವ್ಯ ಅನುಭೂತಿಗಳ ಮೂಲಕ ಸ್ಪಷ್ಟವಾಗಿ ತೋರಿಸಿದರು. ಈ ಮೂಲಕ ಧರ್ಮಶ್ರದ್ಧೆಯನ್ನು ಜಾಗೃತಗೊಳಿಸಿದರು. ''ನನ್ನಿಂದ ಹೋಗಲಾಗದ ತೀರ್ಥಸ್ಥಳಗಳಿಗೆ ನೀನು ಹೋಗಬೇಕು'' ಎಂದು ಅವರು ಶ್ರೀಮಾತೆಗೆ ಹೇಳಿದ್ದರು. ಗಯೆ ಹಾಗೂ ಪುರಿ ಜಗನ್ನಾಥ ಕ್ಷೇತ್ರಗಳಿಗೆ ಹೋದರೆ ತಮ್ಮ ಶರೀರ ಭಗವಂತನಲ್ಲಿ ಐಕ್ಯವಾಗುವುದು ಎಂದು ಶ್ರೀರಾಮಕೃಷ್ಣರು ಹೇಳುತ್ತಿದ್ದರು. ಆದ್ದರಿಂದ ಈ ಎರಡು ಕ್ಷೇತ್ರಗಳಿಗೆ ಅವರು ಹೋಗಲಿಲ್ಲ. ಶ್ರೀಮಾತೆ ಶ್ರೀರಾಮಕೃಷ್ಣರ ಸಣ್ಣ ಭಾವಚಿತ್ರವನ್ನು ತಮ್ಮ ಬಳಿಯಲ್ಲಿಟ್ಟುಕೊಂಡು ಎಲ್ಲೆಡೆ ಕೊಂಡೊಯ್ಯುತ್ತಿದ್ದರು. ದೇವಸ್ಥಾನಗಳಿಗೆ ಹೋದಾಗ ಅದನ್ನು ಹೊರತೆಗೆದು ದೇವರೆಡೆ ತೋರಿಸಿ ತನ್ಮೂಲಕ ಶ್ರೀರಾಮಕೃಷ್ಣರಿಗೆ ತೀರ್ಥಕ್ಷೇತ್ರಗಳ ದರ್ಶನ ಮಾಡಿಸುತ್ತಿದ್ದರು. ಎಂತಹ ಅದ್ಭುತ ರೀತಿಯಲ್ಲಿ ಶ್ರೀರಾಮಕೃಷ್ಣರ ಮಾತುಗಳನ್ನು ಪೂರೈಸಿದರು. ಶ್ರೀರಾಮಕೃಷ್ಣರಂತೆಯೇ ಶ್ರೀಮಾತೆ ಕೂಡ ಎಲ್ಲ ತೀರ್ಥಕ್ಷೇತ್ರಗಳಲ್ಲೂ ದಿವ್ಯ ದರ್ಶನವನ್ನು ಕಾಣುತ್ತಿದ್ದರು. ಹೀಗೆ ಸನಾತನ ಧರ್ಮದ ನಂಬಿಕೆ-ವಿಶ್ವಾಸಗಳಿಗೆ ತಮ್ಮ ಅನುಭವಗಳ ಮೂಲಕ ಒತ್ತಾಸೆ ನೀಡಿದರು.


ಅವತಾರಪುರುಷರಾದ ಶ್ರೀರಾಮಕೃಷ್ಣರು ಮಹಾಸಮಾಧಿಯನ್ನು ಹೊಂದಿದ ಮೇಲೆ ಅಂತಹ ಅದ್ಭುತ ವ್ಯಕ್ತಿಯನ್ನು ಪತಿಯಾಗಿ ಪಡೆದಿದ್ದ ಶ್ರೀಮಾತೆಗೆ ಅವರ ವಿಯೋಗ ಅಸಹನೀಯವಾಯಿತು. ಇಷ್ಟದೇವತೆ, ಗುರು, ತಂದೆ, ಪತಿ, ಹಿತೈಷಿ, ಸಖ-ಎಲ್ಲವೂ ಆಗಿದ್ದ ವ್ಯಕ್ತಿಯ ಅಗಲಿಕೆಯನ್ನು ಸಹಿಸುವುದು ಅಸಾಧ್ಯವೇ. ಯಾವುದೇ ಮಾನವೀಯ ಸಹಜ ದೇಹಸಂಬಂಧವನ್ನು ಹೊಂದಿಲ್ಲದಿದ್ದರೂ, ಪತಿ-ಪತ್ನಿಯರ ನಡುವೆ ದಿವ್ಯ ಪ್ರೇಮದ ಅತ್ಯುನ್ನತ ಸಂಬಂಧವಿತ್ತು. ಶ್ರೀರಾಮಕೃಷ್ಣರು ತೀರಿಕೊಂಡ ಎರಡು ವಾರಗಳ ನಂತರ, ಆಗಸ್ಟ್ ೩೦, ೧೮೮೬ರಂದು, ಸ್ವಾಮಿ ಯೋಗಾನಂದ(ಯೋಗಿನ್), ಸ್ವಾಮಿ ಅದ್ಭುತಾನಂದ(ಲಾಟು), ಸ್ವಾಮಿ ಅಭೇದಾನಂದ(ಕಾಲಿ), ಗೋಲಾಪ್ ಮಾ, ಲಕ್ಷ್ಮೀ, ನಿಕುಂಜಾ ದೇವಿ (ಮಾಸ್ಟರ್ ಮಹಾಶಯರ ಪತ್ನಿ) ಇವರುಗಳ ಜೊತೆಯಲ್ಲಿ ವೈದ್ಯನಾಥ ಶಿವ, ತಾಯಿ ಅನ್ನಪೂರ್ಣೆ ಹಾಗೂ ಇತರ ದೇವಾಲಯಗಳ ದರ್ಶನ ಮಾಡಿದರು. ಒಂದು ಸಂಜೆ ಶ್ರೀವಿಶ್ವನಾಥನ ಆರತಿಯನ್ನು ನೋಡುತ್ತ ಸಮಾಧಿಯಲ್ಲಿ ಮಗ್ನರಾದರು. ''ಶ್ರೀರಾಮಕೃಷ್ಣರೇ ನನ್ನ ಕೈಹಿಡಿದುಕೊಂಡು, ನಿವಾಸಕ್ಕೆ ಮರಳಿ ಕರೆದುಕೊಂಡು ಬಂದರು'' ಎಂದು ನಂತರ ಅವರು ಹೇಳಿದರು. ಪ್ರಯಾಗದಲ್ಲಿ ಒಂದು ದಿನವಿದ್ದು ತ್ರಿವೇಣಿಯಲ್ಲಿ ಮಿಂದರು. ಅಯೋಧ್ಯೆಯಲ್ಲಿ ಶ್ರೀಮಾತೆ ಸರಯೂ ನದಿಯಲ್ಲಿ ಸ್ನಾನ ಮಾಡಿ, ತಾವೇ ಅಡುಗೆ ಮಾಡಿ ಎಲ್ಲರಿಗೂ ಬಡಿಸಿದರು. ಯೋಗೇನ್ ಮಹಾರಾಜರು, ''ಓಹ್! ಎಂತಹ ಭಾಗ್ಯ ! ಇಂದು ಅಯೋಧ್ಯೆಯಲ್ಲಿ ಸೀತಾಮಾತೆಯೇ ನಮಗೆಲ್ಲ ಉಣಬಡಿಸಿದರು!'' ಎಂದು ಆನಂದಪಟ್ಟರು.

ಮಾರನೆಯ ದಿನ ರೈಲಿನಲ್ಲಿ ವೃಂದಾವನಕ್ಕೆ ಹೋಗುತ್ತಿದ್ದಾಗ, ಶ್ರೀಮಾತೆ ಗಾಡಿಯ ಕಿಟಕಿಯ ಮೇಲೆ ಕೈಯಿಟ್ಟು ಮಲಗಿದ್ದರು. ಶ್ರೀರಾಮಕೃಷ್ಣರು ಸಾಧನೆಯ ಕಾಲದಲ್ಲಿ ಒಮ್ಮೆ ಧರಿಸಿದ್ದ ಕಡಗ ಶ್ರೀಮಾತೆಯ ತೋಳಿನಲ್ಲಿತ್ತು. ಇದ್ದಕ್ಕಿದ್ದಂತೆ ಶ್ರೀರಾಮಕೃಷ್ಣರು ಅವರಿಗೆ ಕಿಟಕಿಯ ಮೂಲಕ ದರ್ಶನವಿತ್ತು, ''ಆ ಕಡಗವನ್ನು ಎಲ್ಲರಿಗೂ ಕಾಣುವಂತೆ ಹಾಗೇಕೆ ಧರಿಸಿರುವೆ? ಕಳ್ಳ ಅದನ್ನು ಸುಲಭವಾಗಿ ಕದಿಯಬಹುದಲ್ಲ!'' ಎಂದು ಎಚ್ಚರಿಸಿದರು. ಕೂಡಲೇ ಶ್ರೀಮಾತೆ ಎದ್ದು, ಅದನ್ನು ತೆಗೆದು ಜೋಪಾನವಾಗಿ ತಮ್ಮ ಟ್ರಂಕಿನೊಳಗೆ ಇರಿಸಿದರು. ಶ್ರೀರಾಮಕೃಷ್ಣರು ಸದಾ ತಮ್ಮನ್ನು ಕಾಪಾಡುತ್ತಿದ್ದಾರೆಂದು ಶ್ರೀಮಾತೆಗೆ ಮನವರಿಕೆಯಾಯಿತು. ಮತ್ತೆಂದೂ ಆ ಕಡಗ ವನ್ನು ಅವರು ಧರಿಸಲಿಲ್ಲ. ಅದಕ್ಕೆ ನಿತ್ಯ ಪೂಜೆ ಸಲ್ಲಿಸುತ್ತಿದ್ದರು ಹಾಗೂ ನಂತರ ಬೇಲೂರು ಮಠ ಪ್ರಾರಂಭವಾದಾಗ ಅದನ್ನು ಮಠಕ್ಕೆ ಒಪ್ಪಿಸಿಬಿಟ್ಟರು! ಬಲರಾಮ ಬಸುವಿನ ಮನೆತನದವರು ವೃಂದಾವನದಲ್ಲಿ 'ಕಾಲಾಬಾಬುವಿನ ತೋಪು' ಎಂಬ ತೋಟದ ಮಾಲಿಕರಾಗಿದ್ದರು. ಸುಂದರವಾದ ಶ್ರೀಕೃಷ್ಣ ದೇವಾಲಯವಿದ್ದ ಆ ತೋಟದ ಮನೆಯಲ್ಲಿ ಶ್ರೀಮಾತೆ ಹಾಗೂ ಅವರ ಜೊತೆಯಲ್ಲಿದ್ದವರಿಗೆ ಉಳಿಯಲು ವ್ಯವಸ್ಥೆಯಾಗಿತ್ತು, ಪಕ್ಕದಲ್ಲೇ ಯಮುನಾ ನದಿ ಇತ್ತು, ಆಗಿನ ದಿನಗಳಲ್ಲಿ ಆಗಾಗ ದುಃಖದಿಂದ ಅಳುತ್ತಿದ್ದರು. ಒಂದು ರಾತ್ರಿ ಶ್ರೀರಾಮಕೃಷ್ಣರು ಅವರಿಗೆ ದರ್ಶನ

ವಿತ್ತು, ''ನೀನೇಕೆ ಹೀಗೆ ಅಳುತ್ತಿರುವೆ? ನಾನೆಲ್ಲಿಗೆ ಹೋಗಿರುವೆ? ಒಂದು ಕೋಣೆಯಿಂದ ಮತ್ತೊಂದಕ್ಕೆ ಅಷ್ಟೆ! ಅಲ್ಲವೆ?'' ಎಂದು ಹೇಳಿದರು. ಹೀಗೆ ಮತ್ತೆ ಮತ್ತೆ ಪತಿದೇವರ ದರ್ಶನವಾದಾಗ ಶ್ರೀಮಾತೆಯ ಮನಸ್ಸು ಶಾಂತವಾಯಿತು. ವೃಂದಾವನದಲ್ಲಿ ಶ್ರೀಮಾತೆ ಅತ್ಯುನ್ನತ ಭಾವಾವಸ್ಥೆಯಲ್ಲಿ ಇರುತ್ತಿದ್ದರು. ಯಮುನಾ ತೀರದಲ್ಲಿ ಹಾಗೂ ಇತರ ಪವಿತ್ರ ಸ್ಥಳಗಳಲ್ಲಿ ಶ್ರೀಕೃಷ್ಣನನ್ನು ಕಾಣಲು ಏಕಾಕಿಯಾಗಿಯೇ ಹೋಗಿ ಬಿಡುತ್ತಿದ್ದರು! ಭಕ್ತರು ಮತ್ತೆ ನಿವಾಸಕ್ಕೆ ಕರೆದುಕೊಂಡು ಬರುತ್ತಿದ್ದರು. ''ನಾನೇ ರಾಧೆ'' ಎಂದು ಒಮ್ಮೆ ಶ್ರೀಮಾತೆ ಭಕ್ತರಿಗೆ ಹೇಳಿದರು. ಇಡೀ ವೃಂದಾವನ ಕ್ಷೇತ್ರವನ್ನು ಬರಿಗಾಲಿನಲ್ಲಿ ಎಲ್ಲ ಭಕ್ತರಂತೆ ಹದಿನೈದು ದಿನಗಳ ಕಾಲ ಪರಿಕ್ರಮ ಮಾಡಿದರು ಶ್ರೀಮಾತೆ. ವೃಂದಾವನದಲ್ಲಿದ್ದಾಗ ಅವರ ನಡೆ, ನುಡಿ, ವಿಚಾರಗಳು ಎಲ್ಲವೂ ಶ್ರೀರಾಮಕೃಷ್ಣರಂತೆಯೇ ಆಗಿತ್ತು ಎಂದು ಸ್ವಾಮಿ ಯೋಗಾನಂದರು ಹೇಳುತ್ತಾರೆ. ಶ್ರೀರಾಮಕೃಷ್ಣರ ಆದೇಶದಂತೆ ಶ್ರೀಮಾತೆ ಮೊಟ್ಟಮೊದಲ ಬಾರಿ, ಯೋಗೇನ್ ಮಹಾರಾಜರಿಗೆ ಮಂತ್ರದೀಕ್ಷೆಯನ್ನು ನೀಡಿದರು. ತಮ್ಮ ಆಧ್ಯಾತ್ಮಿಕ ದೀಕ್ಷೆ ನೀಡುವ ಕಾರ್ಯವನ್ನು ತನ್ಮೂಲಕ ಪ್ರಾರಂಭಿಸಿದರು.

ಶ್ರೀರಾಮಕೃಷ್ಣರು ಹಾಗೂ ಶ್ರೀಮಾತೆ ಅನೇಕ ಬಾರಿ ಕಲ್ಕತ್ತೆಯಿಂದ ಕಾಮಾರಪುಕುರ ಹಾಗೂ ಜಯರಾಂಬಾಟಿಗೆ ಹೋಗಿದ್ದಾರೆ. ಹಾಗೆಯೇ ತಾರಕೇಶ್ವರ, ವಿಷ್ಣುಪುರ, ಕೋಯಿಲ್‌ಪಾರಾ, ಶಿಹೋರ್, ಇತ್ಯಾದಿ ಅಕ್ಕಪಕ್ಕದ ಊರು ಹಳ್ಳಿಗಳಿಗೂ ಹೋಗಿದ್ದಾರೆ. ಈ ಎಲ್ಲ ಸ್ಥಳಗಳೂ ಇಂದು ಪುಣ್ಯಕ್ಷೇತ್ರಗಳಾಗಿವೆ. ಅವರ ಪಾದಧೂಳಿಯಿಂದ ಈ ಬಡಹಳ್ಳಿಗಳೂ ಪಟ್ಟಣಗಳಾಗಿ ಇಂದು ಪ್ರಸಿದ್ಧಿ ಪಡೆದಿವೆ, ಪವಿತ್ರವಾಗಿವೆ. ಒಮ್ಮೆ ಒಬ್ಬ ಭಕ್ತರು ಶ್ರೀಮಾತೆಯನ್ನು ಕೇಳಿದರು, ''ಅನೇಕ ಬಡವರ ಮನಸ್ಸಿನಲ್ಲಿ ಕಾಶಿ, ವೃಂದಾವನಗಳನ್ನು ನೋಡಬೇಕು ಎಂಬ ಹಂಬಲವಿರುತ್ತದೆ. ಆರ್ಥಿಕ ಸಮಸ್ಯೆಗಳಿಂದ ಹೋಗದೆ ಉಳಿಯುತ್ತಾರೆ, ಮನಸ್ಸಿನಲ್ಲಿ ನೋವನ್ನು ಅನುಭವಿಸುತ್ತಾರೆ! ಅವರುಗಳು ಏನು ಮಾಡಬೇಕು?'' ಶ್ರೀಮಾತೆ ಕೂಡಲೇ ಹೇಳಿದರು, ''ಏಕೆ? ಅವರು ದುಃಖಪಡುವುದು ಬೇಡ! ದಕ್ಷಿಣೇಶ್ವರ ಹಾಗೂ ಬೇಲೂರು ಮಠ ದರ್ಶಿಸಿದರೆ, ಕಾಶಿ, ವೃಂದಾವನಗಳಿಗೆ ಸಮನಾದ ಪುಣ್ಯ ಲಭಿಸುವುದು ನಿಶ್ಚಿತ. ಶ್ರೀರಾಮಕೃಷ್ಣರ ಪವಿತ್ರ ಸಾನ್ನಿಧ್ಯ ಅಲ್ಲಿದೆ. ಅವರ ಅದ್ಭುತ ಸಾಧನೆ-ದರ್ಶನಗಳಿಂದ ದಕ್ಷಿಣೇಶ್ವರವು ಮುಕ್ತಿಯ ಕ್ಷೇತ್ರವಾಗಿದೆ.'' ೧೮೮೮ರಲ್ಲಿ ಶ್ರೀಮಾತೆ ಸಂಗಡಿಗರೊಂದಿಗೆ ಪುರೀಕ್ಷೇತ್ರಕ್ಕೆ ಹೋಗಿ ಕೆಲವು ಕಾಲ ವಿದ್ದರು. ಜಗನ್ನಾಥನನ್ನು ಶಿವನಾಗಿಯೂ ತಾವು ಅವನಿಗೆ ಚಾಮರದಿಂದ ಸೇವೆ ಸಲ್ಲಿಸುತ್ತಿರುವುದಾಗಿಯೂ ಕಂಡರು! ಕಲ್ಕತ್ತೆಯಲ್ಲಿದ್ದಾಗ ಕಾಳೀಘಾಟ್‌ನ ಪ್ರಸಿದ್ಧ ಕಾಳೀದೇವಸ್ಥಾನಕ್ಕೆ ಭೇಟಿ ನೀಡಿದರು. ಶ್ರೀರಾಮಕೃಷ್ಣರು ಈ ದೇವಸ್ಥಾನಕ್ಕೆ ಹೋಗಿದ್ದರು. ಸ್ವಾಮಿ ಪ್ರೇಮಾನಂದರ ಜನ್ಮಸ್ಥಾನವಾದ ಆಂಟ್‌ಪುರಕ್ಕೆ ಶ್ರೀಮಾತೆ ೧೮೯೮ರಲ್ಲಿ ಹೋಗಿ ಕೆಲವು ದಿನ ಉಳಿದಿದ್ದರು.

೧೯೧೦ರ ಡಿಸೆಂಬರ್ ತಿಂಗಳಲ್ಲಿ ಶ್ರೀಮಾತೆ, ಗೋಲಾಪ್ ಮಾ, ರಾಧು, ಸುರಬಾಲಾ, ಸ್ವಾಮಿ ಆತ್ಮಾನಂದ, ಸ್ವಾಮಿ ಧೀರಾನಂದ,


ರಾಮೇಶ್ವರಂ

ಆಶು, ಕೃಷ್ಣಭಾವಿನಿ ಹಾಗೂ ಮತ್ತೊಬ್ಬ ಮಹಿಳೆಯೊಂದಿಗೆ ಒರಿಸ್ಸಾದ ಕೋಥಾರ್ ಗ್ರಾಮದಲ್ಲಿದ್ದ ಬಲರಾಮ ಬಸುವಿನ ತೋಟದ ಮನೆಗೆ ಹೋದರು. ವಿಶಾಲವಾಗಿದ್ದ ಆ ಮನೆ ಹಾಗೂ ತೋಟ, ಕೊಳಗಳನ್ನು ಕಂಡು ಶ್ರೀಮಾತೆಗೆ ಬಹಳ ಸಂತೋಷವಾಯಿತು. ತಮ್ಮ ಹಳ್ಳಿಯಾದ ಜಯರಾಂಬಾಟಿಯಂತೆ ಇಲ್ಲಿ ಮುಕ್ತವಾಗಿ ಓಡಾಡುತ್ತ, ಎಲ್ಲರನ್ನೂ ಪ್ರೀತಿಯಿಂದ ಮಾತನಾಡಿಸುತ್ತ ೬೬ ದಿನಗಳ ಕಾಲ ತಂಗಿದ್ದರು! ಅಲ್ಲಿದ್ದಾಗ ಪ್ರಸಿದ್ಧ ತೀರ್ಥಕ್ಷೇತ್ರವಾದ ರಾಮೇಶ್ವರಕ್ಕೆ ಹೋಗಬಹುದು ಎಂಬ ಮಾತು ಕೇಳಿದಾಗ ಶ್ರೀಮಾತೆ ಅತ್ಯಂತ ಸಂತೋಷದಿಂದ ಸಮ್ಮತಿಸಿದರು; ''ನನ್ನ ಮಾವನವರು ಅಲ್ಲಿಗೆ ಹೋಗಿದ್ದರು ಹಾಗೂ ಅಲ್ಲಿಂದ ಅವರು ತಂದ ಶಿವಲಿಂಗಕ್ಕೆ ಕಾಮಾರಪುಕುರದಲ್ಲಿ ನಿತ್ಯಪೂಜೆ ನಡೆಯುತ್ತಿದೆ. ಅಲ್ಲಿಗೆ ನಾನೂ ಹೋಗುವೆ!'' ಎಂದರು. ಸ್ವಾಮಿ ರಾಮಕೃಷ್ಣಾನಂದರು ಆಗಿನ ದಿನಗಳಲ್ಲಿ ಚೆನ್ನೈನಲ್ಲಿದ್ದರು. ಅವರು ಅತ್ಯಂತ ಶ್ರದ್ಧೆ-ಭಕ್ತಿಗಳಿಂದ ಎಲ್ಲ ವ್ಯವಸ್ಥೆಗಳನ್ನೂ ಮಾಡುವರು ಎಂಬ ಭರವಸೆಯಿತ್ತು ಎಲ್ಲರಿಗೂ. ಸ್ವಾಮಿ ಶಾರದಾನಂದರು ಪ್ರಯಾಣಕ್ಕೆ ಬೇಕಾಗುವ ಆರ್ಥಿಕ ವ್ಯವಸ್ಥೆಯನ್ನು ಮಾಡಿದರು. ಇನ್ನುಳಿದ ಹಣದ ವ್ಯವಸ್ಥೆ, ಗಾಡಿ ಇತ್ಯಾದಿಗಳನ್ನು ಶಶಿ ಮಹಾರಾಜರು ಮಾಡಿದರು. ೧೩ ಜನರೊಂದಿಗೆ ಶ್ರೀಮಾತೆ ದಕ್ಷಿಣ ಭಾರತಕ್ಕೆ ಪ್ರಯಾಣ ಮಾಡಿದರು! ಒರಿಸ್ಸಾದ ರೈಲುಗಾಡಿಯಲ್ಲಿ ಬೆರ್‌ಹಮ್‌ಪುರಕ್ಕೆ ಬಂದು, ಅಲ್ಲಿ ಒಬ್ಬ ಭಕ್ತರ ಮನೆಯಲ್ಲಿ ಒಂದು ದಿನ ತಂಗಿ, ಮತ್ತೆ ಮದ್ರಾಸಿಗೆ ಮರುದಿನ ಪ್ರಯಾಣ ಮಾಡಿದರು. ಹೋದಲ್ಲೆಲ್ಲ, ಅವರನ್ನು ಕಾಣಲು ಬರುತ್ತಿದ್ದ ಆಸ್ತಿಕ ಭಕ್ತರಿಗೆ ಪ್ರೀತಿಯಿಂದ ಆಶೀರ್ವದಿಸುತ್ತಿದ್ದರು. ಬೆಟ್ಟ-ಗುಡ್ಡಗಳು, ನದಿ-ಕೆರೆಗಳು, ಹಳ್ಳಿ-ಪಟ್ಟಣಗಳು ಈ ಎಲ್ಲ ಹೊಸ ದೃಶ್ಯಗಳನ್ನು ನೋಡುತ್ತ ಆನಂದಿಸಿದರು. ಫೆಬ್ರವರಿ ೧೧, ೧೯೧೧ರಂದು ಮದ್ರಾಸು ನಗರವನ್ನು ತಲುಪಿದರು. ಅಪೂರ್ವ ಸ್ವಾಗತ ಅವರಿಗೆ ಎಲ್ಲೆಡೆ ಕಾದಿತ್ತು. ಭಕ್ತರು ಅವರನ್ನು ಜಗನ್ಮಾತೆ, ಶ್ರೀರಾಮಕೃಷ್ಣರ ಸಹಧರ್ಮಿಣಿ, ಸ್ವಾಮಿ ವಿವೇಕಾನಂದರ ಗುರುಪತ್ನಿಯೆಂದೇ ಕಂಡರು. ಶ್ರೀಮಾತೆ ದಕ್ಷಿಣಭಾರತದ ವ್ಯಂಜನಗಳನ್ನು ಸಂತೋಷದಿಂದ ಸ್ವೀಕರಿಸುತ್ತಿದ್ದರು. ದಕ್ಷಿಣದ ರಸಂ, ಸಾಂಬಾರ್‌ಗಳನ್ನು ಮೆಚ್ಚುತ್ತಿದ್ದರು. ಅನೇಕ ಭಕ್ತರಿಗೆ ಈಗಾಗಲೇ ಶ್ರೀರಾಮಕೃಷ್ಣರ ಹಾಗೂ ಶ್ರೀಮಾತೆಯ ಸ್ವಪ್ನದರ್ಶನವಾಗಿತ್ತು. ಅವರಿಗೆಲ್ಲ ಶ್ರೀಮಾತೆ ದೀಕ್ಷೆ ನೀಡಿ ಆಶೀರ್ವದಿಸಿದರು.

ದಕ್ಷಿಣ ಭಾರತದ ಭಕ್ತರ ಶ್ರದ್ಧಾ-ಭಕ್ತಿಗಳನ್ನು ಕಂಡು ಶ್ರೀಮಾತೆಗೆ ಬಹಳ ಸಂತೋಷವಾಯಿತು. ಇದರ ಬಗ್ಗೆ ಮತ್ತೆ ಮತ್ತೆ ಹೇಳಿದ್ದಾರೆ.

ಮದುರೈಯಲ್ಲಿ ಮೀನಾಕ್ಷಿ-ಸುಂದರೇಶ್ವರ ದೇವಸ್ಥಾನಕ್ಕೆ ಹೋದರು ಶ್ರೀಮಾತೆ. ಭವ್ಯವಾದ ದೇವಸ್ಥಾನಗಳನ್ನು ಹಾಗೂ ದೃಶ್ಯಗಳನ್ನು ಕಂಡು ಶ್ರೀಮಾತೆ, ''ಶ್ರೀರಾಮಕೃಷ್ಣರ ಲೀಲೆ ಎಷ್ಟು ಅದ್ಭುತ!'' ಎಂದ ಉದ್ಗರಿಸಿದರು. ರಾಮೇಶ್ವರದಲ್ಲಿ ಸಮುದ್ರ ಸ್ನಾನವನ್ನು ಮಾಡಿದರು. ಸ್ವಾಮಿ ರಾಮಕೃಷ್ಣಾನಂದರು ೧೦೮ ಬಂಗಾರದ ಬಿಲ್ವಪತ್ರಗಳನ್ನು ಮದ್ರಾಸಿನಿಂದ ಮಾಡಿಸಿಕೊಂಡು ತಂದಿದ್ದರು. ರಾಮನಾಡಿನ ರಾಜರಾಜೇಶ್ವರ ಸೇತುಪತಿಯ ನಿರ್ದೇಶಗಳಿಗನುಸಾರ ಶ್ರೀಮಾತೆಗೆ ದೇವಸ್ಥಾನದಲ್ಲಿ ಸಂಪೂರ್ಣ ಸ್ವಾತಂತ್ರ್ಯ ನೀಡಲಾಗಿತ್ತು . ಗಂಗಾಜಲ ಹಾಗೂ ಬಂಗಾರದ ಬಿಲ್ವಪತ್ರೆಗಳಿಂದ ತಾವೇ ಸ್ವತಃ ಶಿವನ ಪೂಜೆಯನ್ನು ಗರ್ಭಗೃಹದಲ್ಲಿ ಮಾಡಿದರು. ''ಹಿಂದೆ ಹೇಗೆ ಕಂಡಿದ್ದೆನೋ ಹಾಗೆಯೇ ಇದ್ದಾನೆ ಶಿವ!'' ಎಂದು ಉದ್ಗರಿಸಿದರು. ಸೀತೆಯಾಗಿ ರಾಮನೊಂದಿಗೆ ಪ್ರತಿಷ್ಠಾಪಿಸಿದ್ದ ಶಿವನನ್ನು ಮತ್ತೆ ಕಂಡು ಬಹಳ ಸಂತೋಷವಾಯಿತು ಶ್ರೀಮಾತೆಗೆ. ಇಲ್ಲಿ ಮೂರು ರಾತ್ರಿಗಳು ತಂಗಿದ್ದು, ಪ್ರತಿದಿನವೂ ಶಿವನಿಗೆ ಪೂಜೆ ಸಲ್ಲಿಸಿದರು! ಮೂರನೆಯ ದಿನ ವಿಶೇಷ ಪೂಜೆಯನ್ನು ಮಾಡಿ, ರಾಮೇಶ್ವರ ಕ್ಷೇತ್ರದ ಮಹಿಮೆಯ ಗಾಯನವನ್ನು ಕೇಳಿ, ದೇವಸ್ಥಾನದ ಪೂಜಾರಿಗಳಿಗೆ ಭೋಜನವನ್ನು ಏರ್ಪಡಿಸಿ, ಅವರಿಗೆಲ್ಲ ಉಡುಗೊರೆಯನ್ನು ನೀಡಿದರು. ರಾಜನ ಆದೇಶದಂತೆ ದೇವಸ್ಥಾನದ ತಿಜೋರಿ (ರತ್ನಭಂಡಾರ)ಯನ್ನು ಶ್ರೀಮಾತೆ ಹಾಗೂ ಸಂಗಡಿಗರಿಗಾಗಿ ತೆರೆದಿಡಲಾಯಿತು. ಅನೇಕ ಆಭರಣಗಳು, ರತ್ನ-ವೈಡೂರ್ಯಗಳಿಂದ ಆ ಕೋಣೆ ತುಂಬಿತ್ತು. ಶ್ರೀಮಾತೆಗೆ ಏನು ಬೇಕಾದರೂ ತೆಗೆದುಕೊಳ್ಳುವ ಸ್ವಾತಂತ್ರ್ಯವಿತ್ತು. ತನಗೇನೂ ಬೇಡ ಆದರೆ ರಾಧುವಿಗೆನಾದರೂ ಇಷ್ಟವಿದ್ದರೆ ತೆಗೆದುಕೊಳ್ಳಬಹುದೆಂದರು. ಇತ್ತ ಅವರ ಮನಸಿನಲ್ಲಿ ತಳಮಳ ಪ್ರಾರಂಭವಾಯಿತು. ಅವಳೇನಾದರೂ ಲೋಭದಿಂದ ಬಹಳ ಬೆಲೆಬಾಳುವ ವಸ್ತು ಕೇಳಿದರೆ ಏನು ಮಾಡುವುದೆಂದು ಪುನಃ ಪುನಃ ಶ್ರೀರಾಮಕೃಷ್ಣರಲ್ಲಿ ಹಾಗಾಗದಿರಲಿ ಎಂದು ಪ್ರಾರ್ಥಿಸಿದರು. ಅವರ ಪ್ರಾರ್ಥನೆಗೆ ಓಗೊಟ್ಟಂತೆ, ''ನನಗೇನೂ ಬೇಡ, ಮುರಿದು ಹೋದ ಪೆನ್ಸಿಲ್ ಕೊಟ್ಟರೆ ಸಾಕು'' ಎಂದಳು ರಾಧು! ಶ್ರೀಮಾತೆಗೆ ಐಹಿಕ ವಸ್ತುಗಳಲ್ಲಿ ಯಾವ ಆಕರ್ಷಣೆಯೂ ಇರಲಿಲ್ಲ! ಸ್ವತಃ ಲಕ್ಷ್ಮೀದೇವತೆಯಲ್ಲವೆ! ಅವರಿಗೇನೂ ಕೊರತೆ? ಬಯಕೆ, ಆಸೆ, ಲೋಭಗಳನ್ನೆಲ್ಲ ಗೆದ್ದ ಉದಾತ್ತ ವ್ಯಕ್ತಿತ್ವ ಅಲ್ಲವೆ!

ಅಲ್ಲಿಂದ ಶ್ರೀಮಾತೆ ಮಾರ್ಚ್ ೧೯೧೧ರ ಕೊನೆಯ ವಾರ ಬೆಂಗಳೂರಿಗೆ ಬಂದರು. ಬೆಂಗಳೂರಿನ ಬಸವನಗುಡಿಯಲ್ಲಿರುವ ಮಠದಲ್ಲಿ ಮೂರು ದಿನ ತಂಗಿದ್ದರು. ಅಲ್ಲಿದ್ದಾಗ ಶ್ರೀ ರಾಮಕೃಷ್ಣರಿಗೆ ನಿತ್ಯಪೂಜೆ ಮಾಡುತ್ತಿದ್ದರು, ಗವಿ ಗಂಗಾಧರ ಹಾಗೂ ಗಣಪತಿಯ ದೇವಸ್ಥಾನಗಳಿಗೆ ಭೇಟಿಯಿತ್ತರು. ಶ್ರೀಮಾತೆ ತಂಗಿದ್ದ ಕೋಣೆಯಲ್ಲಿ ಈಗ ಶ್ರೀಮಾತೆಯ ಭಾವಚಿತ್ರವಿದೆ ಹಾಗೂ ನಿತ್ಯವೂ


ಶ್ರೀಮಾತೆಯವರ ಶಿಲೆ, ಬೆಂಗಳೂರು

ಪೂಜೆ ಸಲ್ಲುತ್ತದೆ. ಒಂದು ದಿನ ಸಂಜೆಯ ಸಮಯದಲ್ಲಿ ಶ್ರೀಮಾತೆ ಆಶ್ರಮದಲ್ಲಿದ್ದ ಸಣ್ಣ ದಿಬ್ಬವನ್ನು ಏರಿ, ಸೂರ್ಯಾಸ್ತದ ರಮಣೀಯ ದೃಶ್ಯವನ್ನು ನೋಡುತ್ತ ಸಮಾಧಿಸ್ಥರಾದರು. ಈ ಪವಿತ್ರ ಸ್ಥಾನದಲ್ಲಿ ಸುಂದರವಾದ ಮಂಟಪದಲ್ಲಿ ಶ್ರೀಮಾತೆಯವರ ಚಿತ್ರವನ್ನಿಡಲಾಗಿದೆ. ಅನೇಕ ಭಕ್ತರು ಪ್ರತಿನಿತ್ಯವೂ ಇಲ್ಲಿ ಧ್ಯಾನಾದಿಗಳನ್ನು ಮಾಡುತ್ತಾರೆ. ಅನೇಕರಿಗೆ ಈ ಸ್ಥಳದಲ್ಲಿ ಆಧ್ಯಾತ್ಮಿಕ ಅನುಭವಗಳಾಗಿವೆ. ಆ ಸ್ಥಳವನ್ನು ಶಕ್ತಿಯುತವಾದ ಪವಿತ್ರ ಸ್ಥಳವನ್ನಾಗಿಸಿದ್ದಲ್ಲದೆ ಶ್ರೀಮಾತೆ ಬೆಂಗಳೂರಿನ ಆಶ್ರಮದಲ್ಲಿ ಸದಾ ನೆಲೆಸಿದ್ದಾರೆ ಎಂದು ಅನೇಕರ ಅನುಭವ! ದಕ್ಷಿಣ ಭಾರತವನ್ನೇ ಪವಿತ್ರವಾಗಿಸಿದ್ದಾರೆ!

ಪುನಃ ೧೯೧೨ರ ನವೆಂಬರ್ ತಿಂಗಳಲ್ಲಿ ಶ್ರೀಮಾತೆ ಸಂಗಡಿಗರೊಂದಿಗೆ ವಾರಾಣಸಿಗೆ ಹೋದರು. ಈಗಾಗಲೇ ಅವರ ಪುತ್ರರಂತಿದ್ದ ಯೋಗೇನ್ (ಸ್ವಾಮಿ ಯೋಗಾನಂದ), ನರೇನ್ (ಸ್ವಾಮಿ ವಿವೇಕಾನಂದ), ಶಶಿ (ಸ್ವಾಮಿ ರಾಮಕೃಷ್ಣಾನಂದ) ಹಾಗೂ ಭಕ್ತಾಗ್ರೇಸರನಾದ ಶ್ರೀ ಗಿರೀಶ್‌ಚಂದ್ರ ಘೋಷ್ ತೀರಿಕೊಂಡಿದ್ದರು. ಇವರೆಲ್ಲರ ವಿಯೋಗದ ದುಃಖವನ್ನು ಕಳೆಯಲೋಸುಗ ಕಟ್ಟಕಡೆಯ ಬಾರಿ ಶ್ರೀಮಾತೆ ಪ್ರಯಾಣ ಹೊರಟರು. ಆಗ ಸ್ವಾಮಿ ಬ್ರಹ್ಮಾನಂದರು, ಶಿವಾನಂದರು, ತುರೀಯಾನಂದರು ಹಾಗೂ ವಿಜ್ಞಾನಾನಂದರು ಅಲ್ಲಿದ್ದರು. ಬಳಿಯಲ್ಲೇ ಇರುವ 'ಲಕ್ಷ್ಮೀ ನಿವಾಸ' ಶ್ರೀಮಾತೆಯ ವಾಸಸ್ಥಳವಾಯಿತು. ಆಶ್ರಮದಲ್ಲಿ ನಡೆಯುತ್ತಿದ್ದ ಸೇವಾಕಾರ್ಯಗಳನ್ನು ವೀಕ್ಷಿಸಿ ಶ್ರೀಮಾತೆ ಹೇಳಿದರು, ''ಇಲ್ಲಿ ಶ್ರೀರಾಮಕೃಷ್ಣರ ಸಾನ್ನಿಧ್ಯ ನಿತ್ಯವೂ ಇದೆ. ತಾಯಿ ಲಕ್ಷ್ಮಿಯ ಕೃಪಾಕಟಾಕ್ಷ ಇದರ ಮೇಲೆ ಸದಾ ಇದೆ.'' ತಮ್ಮ ಕೋಣೆಗೆ ಹಿಂದಿರುಗಿದ ಮೇಲೆ ಹತ್ತು ರೂಪಾಯಿಗಳನ್ನು ತಮ್ಮ ಕಾಣಿಕೆಯಾಗಿ ಆಸ್ಪತ್ರೆಗಾಗಿ ಕಳಿಸಿದರು. ಈ ಪವಿತ್ರ ಕೃಪಾಧನ



ರಾಮಕೃಷ್ಣ ಸೇವಾಶ್ರಮ, ವಾರಾಣಸಿ

ವನ್ನು ಜೋಪಾನವಾಗಿ ಇಂದಿಗೂ ಇಡಲಾಗಿದೆ! ವಾರಾಣಸಿಯಲ್ಲಿದ್ದಾಗ ಶ್ರೀಮಾತೆಯ ಕರುಣೆಯ ಪ್ರಕಾಶವನ್ನು ಪಡೆದ ಅನೇಕ ಅದ್ಭುತ ಘಟನೆಗಳಾದವು. ಅವುಗಳನ್ನೆಲ್ಲ ವಿವರಿಸುವುದು ಈ ಲೇಖನದಲ್ಲಿ ಸಾಧ್ಯವಿಲ್ಲ. ಭಕ್ತರು ಈ ಘಟನೆಗಳನ್ನು ಓದಿದರೆ ಧ್ಯಾನಮಾಡುವಾಗ ಲೀಲಾಚಿಂತನೆಯನ್ನು ಮಾಡಲು ಸಹಾಯವಾಗುವುದು. ಬುದ್ಧನು ಪವಿತ್ರಗೊಳಿಸಿದ ಸಾರಾನಾಥಕ್ಕೆ ಹೋಗಿ ಬೌದ್ಧವಿಹಾರಗಳನ್ನು ಶ್ರೀಮಾತೆ ನೋಡಿದರು. ಇಲ್ಲಿ ಅವರು ಸಂಘದ ಅಭಿವೃದ್ಧಿಗಾಗಿ ಪ್ರಾರ್ಥನೆ ಮಾಡಿದ್ದರು. ಆದ್ದರಿಂದ ಅವರನ್ನು ಸಂಘಜನನಿ ಎಂದು ಪರಿಗಣಿಸಲಾಗುತ್ತದೆ.

೧೮೮೭ರಲ್ಲಿ ಮೊದಲ ಬಾರಿಗೆ ಶ್ರೀಮಾತೆ ವೃಂದಾವನಕ್ಕೆ ಬಂದಾಗ ಹರಿದ್ವಾರ, ಪುಷ್ಕರ, ಪ್ರಯಾಗ ಕ್ಷೇತ್ರಗಳಿಗೂ ಭೇಟಿ ನೀಡಿದ್ದರು. ಹರಿದ್ವಾರದಲ್ಲಿ ಚಂಡೀ ದೇವಿಯ ಬೆಟ್ಟವನ್ನು ಹತ್ತಿ ದೇವಿಗೆ ಪೂಜೆಗೈದರು. ಅಂತೆಯೇ ಪುಷ್ಕರದಲ್ಲಿ ಸಾವಿತ್ರೀ ದೇವಿಯ ಬೆಟ್ಟವನ್ನು ಹತ್ತಿದರು. ಕಠಿಣವಾದ ಈ ಯಾತ್ರೆಗಳನ್ನು ಶ್ರೀಮಾತೆ ನಮ್ಮೆಲ್ಲರ ಹಿತಕ್ಕಾಗಿಯೇ ಕೈಗೊಂಡದ್ದು. ಇವೆಲ್ಲ ಈಗ ಪುಣ್ಯಸ್ಥಳಗಳಾಗಿವೆ. ಶ್ರೀಮಾತೆಯ ಸುಂದರ ದೇವಾಲಯಗಳು ಸಾವಿತ್ರೀ ಬೆಟ್ಟ ಹಾಗೂ ಗೋದಾವರೀ ನದಿಯ ತೀರದಲ್ಲಿ ನಿರ್ಮಾಣವಾಗಿವೆ. ಪ್ರಯಾಗದಲ್ಲಿ ಶ್ರೀರಾಮಕೃಷ್ಣರ ಪವಿತ್ರ ಕೇಶವನ್ನು ತ್ರಿವೇಣಿ ಕ್ಷೇತ್ರದಲ್ಲಿ ಸಮರ್ಪಿಸಲು ಹೋದಾಗ ಇದ್ದಕ್ಕಿದ್ದಂತೆ ಗಂಗಾನದಿಯು ಮೇಲೆ ಬಂದು ಅವರ ಕೈಗಳಿಂದ ಆ ಪವಿತ್ರ ಅಸ್ಥಿಯನ್ನು ತನ್ನದಾಗಿಸಿಕೊಂಡಿತ್ತು. ಪವಿತ್ರ ಗಂಗೆಯು ಮತ್ತಷ್ಟು ಪವಿತ್ರವಾಗಲು ತವಕದಿಂದ ಶ್ರೀರಾಮಕೃಷ್ಣರನ್ನು ತನ್ನ ಮಡಿಲಿಗೆ ತುಂಬಿಸಿಕೊಂಡಳು ಎಂದು ಶ್ರೀಮಾತೆ ಹೇಳಿದರು.

ಶ್ರೀಮಾತೆಯ ಅದ್ಭುತ ಚರಿತೆ ಹಾಗೂ ಲೀಲೆಗಳನ್ನು ಮತ್ತೆ ಮತ್ತೆ ಓದಿ ಮೆಲುಕು ಹಾಕಬೇಕು. ತಾಯಿಯ ಪ್ರೀತಿ ಮಮತೆಗಳಿಗೆ ಅರ್ಹರಾಗಲು ಆಕೆಯನ್ನು ತಿಳಿಯಬೇಕಲ್ಲವೇ! ಕರುವು ಹತ್ತಾರು ಗೋವುಗಳ ಮಧ್ಯೆ ನೇರವಾಗಿ ತನ್ನ ತಾಯಿಯನ್ನು ಅರಸಿಕೊಂಡು ಹೋಗುವಂತೆ, ನಾವೂ ತಾಯಿಯ ಆಶ್ರಯ ಪಡೆಯಲು ಅವಳ ಬಳಿ ಸಾರಬೇಕು, ಅವಳ ಕುರಿತು ಭಾವಿಸಬೇಕು, ಅವಳನ್ನು ಪ್ರೀತಿಸಬೇಕು. ಶ್ರೀಮಾತೆ ಹೇಳುತ್ತಿದ್ದರು, ''ಮಗುವಿನ 'ಅಮ್ಮಾ' ಎಂಬ ಕರೆಯನ್ನು ಕೇಳಲು ತಾಯಿ ತವಕಿಸುತ್ತಾಳೆ'' ಎಂದು. ಶ್ರೀಮಾತೆ ಭಾರತದ ಎಲ್ಲ ದಿಕ್ಕುಗಳಲ್ಲು ಸಂಚರಿಸಿ ಕೃಪೆ ಮಾಡಿದ್ದಾರೆ. ಹೊರದೇಶಗಳಲ್ಲೂ ಶ್ರೀಮಾತೆಯ ದರ್ಶನವನ್ನು ಪಡೆದ ಅನೇಕ ಭಕ್ತರಿದ್ದಾರೆ! ಆಕೆ ಜಗನ್ಮಾತೆ, ಪತಿತೋದ್ಧಾರಿಣಿ, ಕೃಪಾಮಯಿ, ನಮ್ಮೆಲ್ಲರ ಪ್ರೀತಿಯ ತಾಯಿ. ಓ ತಾಯಿ! ನಮ್ಮನ್ನೆಲ್ಲ ರಕ್ಷಿಸು. ಭಕ್ತಿ-ಶ್ರದ್ಧೆಗಳನ್ನು ನೀಡು ಎಂದು ಏಕಕಂಠದಿಂದ ಹಾಡೋಣ, ಕರೆಯೋಣ, ಬನ್ನಿ. ✽

*With Best Compliments From :*

**GAVIRANGA**
**ENTERPRISES**
**ELECTRONICS DIVISION**

**C-9 & M-4, INDUSTRIAL ESTATE**
**B.H.ROAD, TUMKUR - 572 103, INDIA.**

**Mob: 9844099015**

**E-Mail : jayasimha@gaviranga.com**

***Advantage To World - Class Magnetics***